ಓ.ಎಸ್. ನಂ.256/2018

ಪ್ರಾಸಾ : 1

ಸಾಕ್ಷಿಗೆ ಇಂದು ದಿನಾಂಕ 31.01.2023 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟಿ ಸವಾಲು ಶ್ರೀ ಎಂ.ಎಂ.ಕೆ., ವಕೀಲರಿಂದ 1 ರಿಂದ 5 ನೇ ಪ್ರತಿವಾದಿಗಳ ಪರವಾಗಿ.**

1) ಭೀಮಶ್ಯಾ ಎಂಬುವವರು ನನ್ನ ಗಂಡನಾಗಬೇಕು. ನನ್ನ ವಿವಾಹವು ಭೀಮಶ್ಯಾರವರ ಜೊತೆ ಹಡಲಸಂಗ ಗ್ರಾಮದಲ್ಲಿ ನನಗೆ 22 ವರ್ಷ ವಯಸ್ಸಾಗಿದ್ದಾಗ ಆಗಿರುತ್ತದೆ. ಹಾಲಿ ನನಗೆ 60 ಕ್ಕೂ ಹೆಚ್ಚು ವರ್ಷ ವಯಸ್ಸಾಗಿರುತ್ತದೆ.

2) ವಾದಿ ನಂ.2 ರಿಂದ 5 ಮತ್ತು ಪ್ರತಿವಾದಿ ನಂ.6 ರವರು ವಿದ್ಯಾಭ್ಯಾಸ ಮಾಡಿರುತ್ತಾರೆ. 2 ನೇ ವಾದಿಯು 4 ನೇ ತರಗತಿಯವರೆಗೆ, 3 ರಿಂದ 5 ನೇ ವಾದಿಗಳು 2 ನೇ ತರಗತಿಯವರೆಗೆ, 6 ನೇ ಪ್ರತಿವಾದಿಯು 6 ನೇ ತರಗತಿಯವರೆಗೆ ವ್ಯಾಸಂಗ ಮಾಡಿರುತ್ತಾರೆ. 6 ನೇ ಪ್ರತಿವಾದಿಯು ನನ್ನ ಹಿರಿಯ ಮಗನಾಗಿರುತ್ತಾನೆ. ಪ್ರತಿವಾದಿ ನಂ.6, ವಾದಿ ನಂ.2 ರಿಂದ 5 ರವರನ್ನು ನನ್ನ ಗಂಡ ಶಾಲೆಗೆ ದಾಖಲಿಸಿರುತ್ತಾರೆ. ಅವರ ಎಲ್ಲಾ ಮಾಹಿತಿಗಳನ್ನು ಮತ್ತು ಅವರ ಅಡ್ಡಹೆಸರುಗಳನ್ನು ನನ್ನ ಗಂಡನೇ ನೀಡಿರುತ್ತಾನೆ ಎಂದರೆ ಸರಿ. ನಮ್ಮ ಕುಟುಂಬಕ್ಕೆ ಸಾವಳಸಂಗ ಮತ್ತು ಮಾದರ ಎಂಬ ಎರಡು ಅಡ್ಡಹೆಸರುಗಳಿವೆ. ಅವುಗಳನ್ನು ಬಿಟ್ಟು ಬೇರೆ ಯಾವುದೇ ಅಡ್ಡಹೆಸರುಗಳಿಲ್ಲವೆಂದರೆ ಸರಿ.

3) ಪ್ರತಿವಾದಿ ನಂ.1 ರಿಂದ 5 ರವರು ನನ್ನ ಗಂಡನ ಸಹೋದರರಾಗಿರುತ್ತಾರೆ. ನನ್ನ ಗಂಡನೇ ಹಿರಿಯ ಮಗನೆಂದರೆ ಸರಿ. ನನ್ನ ಗಂಡನೇ ಪ್ರತಿವಾದಿ ನಂ.1 ರಿಂದ 5 ರವರನ್ನು ನೋಡಿಕೊಳ್ಳುತ್ತಿದ್ದರೆಂದರೆ ಸರಿಯಲ್ಲ. ನನ್ನ ಗಂಡ ಮತ್ತು ಪ್ರತಿವಾದಿ ನಂ.1 ರಿಂದ 5 ಒಟ್ಟಿಗೆ ವಾಸವಿದ್ದರು ಎಂದರೆ ಸರಿಯಲ್ಲ. ಸರಕಾರದಿಂದ ದಾವಾ ಸ್ವತ್ತನ್ನು ನನ್ನ ಗಂಡನ ಜೊತೆ ಸೇರಿ ಪ್ರತಿವಾದಿ ನಂ.1 ರಿಂದ 5 ಅವರಿಗೂ ಮಂಜೂರಾಗಿದೆ ಎಂದರೆ ಸರಿಯಲ್ಲ. ನನ್ನ ಗಂಡ ಒಟ್ಟು ಕುಟುಂಬದ ಮುಖ್ಯಸ್ಥನಾದ ಕಾರಣ ಪ್ರತಿವಾದಿ ನಂ.1 ರಿಂದ 5 ರವರ ಪರವಾಗಿ ನನ್ನ ಗಂಡನ ಹೆಸರಿನಲ್ಲಿ ಸ್ವತ್ತು

ಮಂಜೂರಾಗಿದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನಾನು ಮತ್ತು ಪ್ರತಿವಾದಿ ನಂ.1 ರಿಂದ 5 ರವರು ಜಂಟಿ ಸ್ವಾಧೀನನುಭವ ಹೊಂದಿ, ಜಂಟಿಯಾಗಿ ಫಸಲನ್ನು ಅನುಭವಿಸುತ್ತಿದ್ದೇವೆ ಎಂದರೆ ಸರಿಯಲ್ಲ. ನಾನು, ಉಳಿದ ವಾದಿಗಳು ಮತ್ತು ಪ್ರತಿವಾದಿ ನಂ.6 ರವರು ದಾವಾ ಸ್ವತ್ತಿನ ನಿರ್ದಿಷ್ಟ ಸ್ವಾಧೀನನುಭವವನ್ನು ಹೊಂದಿರುತ್ತೇವೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ.

4) ವಾದ ಪತ್ರದಲ್ಲಿ ನನ್ನ ವಿವಾಹವಾದ ವರ್ಷವನ್ನು ನಮೂದಿಸಿರುವುದಿಲ್ಲ. ದಾವಾ ದಾಖಲಿಸಲು ಮಾಹಿತಿ ನಾನೇ ನೀಡಿರುತ್ತೇನೆ. ನಾನು ಭೀಮಶ್ಯಾರವರ ಜೊತೆ ವಿವಾಹವಾಗಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5) ದೇವದಾಸಿ ಪದ್ಧತಿಯ ಬಗ್ಗೆ ನನಗೆ ಗೊತ್ತಿಲ್ಲ. ಸಾಮಾನ್ಯವಾಗಿ ದೇವದಾಸಿಯರು ವಿವಾಹ ಮಾಡಿಕೊಳ್ಳುವುದಿಲ್ಲವೆಂದರೆ ನನಗೆ ಗೊತ್ತಿಲ್ಲ. ನಾನೂ ಸಹ ಹಡಲಸಂಗ ಗ್ರಾಮದ ದೇವದಾಸಿ ಎಂದರೆ ಸರಿಯಲ್ಲ. ನಾನು ಭೀಮಶ್ಯಾರವರನ್ನು ಮದುವೆಯಾಗಿಲ್ಲ, ವಾದಿ ನಂ.2 ರಿಂದ 5 ಮತ್ತು ಪ್ರತಿವಾದಿ ನಂ.6 ಅವರ ಮಕ್ಕಳಲ್ಲವೆಂದರೆ ಸರಿಯಲ್ಲ.

6) ನಿ.ಪಿ.4 ನನ್ನ ಗಂಡನ ಪಡಿತರ ಚೀಟಿಯಾಗಿರುತ್ತದೆ. ಅದನ್ನು ಯಾವಾಗ ಮಾಡಿಸಿರುತ್ತೇವೆ ಎಂದು ನನಗೆ ಗೊತ್ತಿಲ್ಲ. ಆಧಾರ ಕಾರ್ಡನ್ನು ಯಾವಾಗ ಮಾಡಿಸಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ನಿ.ಪಿ.4 ರಿಂದ ನಿ.ಪಿ.7 ರ ದಾಖಲೆಗಳನ್ನು ದಾವಾ ದಾಖಲಿಸಿದ ನಂತರ ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ದಾಖಲೆಗಳನ್ನು ದಾವೆಗೆ ಅನುಗುಣವಾಗಿ ಸೃಷ್ಠಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಸಲ್ಲಿಸಿರುವ ದಾಖಲೆಗಳು ಸುಳ್ಳು ದಾಖಲೆಗಳು ಎಂದರೆ ಸರಿಯಲ್ಲ. ಅದನ್ನು ಯಾವುದೇ ಸಕ್ಷಮ ಪ್ರಾಧಿಕಾರದವರು ನೀಡಿಲ್ಲವೆಂದರೆ ಸರಿಯಲ್ಲ.

7) ಭೀಮಶ್ಯಾ ಮಾದರ ಅವರು ಮೃತರಾದ ನಂತರ ಪ್ರತಿವಾದಿ ನಂ.1 ರಿಂದ 5 ರವರು ಜಮೀನನ್ನು ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಭೀಮಶ್ಯಾ ಮಾದರ ಅವರ ಹೆಂಡತಿಯಾಗದೇ ಇರುವ ಕಾರಣ ನನಗೆ ವಾರಸದ ಹಕ್ಕು ಇಲ್ಲವೆಂದರೆ ಸರಿಯಲ್ಲ. ನಾನು ನ್ಯಾಯಾಲಯದಲ್ಲಿ ಸುಳ್ಳು ದಾವಾ ದಾಖಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ಸರಕಾರಿ ವಕೀಲರು ಪ್ರತಿವಾದಿ ನಂ.7 ಮತ್ತು 8 ರವರ ಪರವಾಗಿ ಪಾಟಿ ಸವಾಲಿಗಾಗಿ ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಇದೆ

**(ದೇವರಾಜು ಹೆಚ್.ಆರ್.)**
ಹೆಚ್ಚುವರಿ ದಿವಾಣಿ ನ್ಯಾಯಾಧೀಶರು
ವ ಜೆ.ಎಂ.ಎಫ್.ಸಿ., ಇಂಡಿ.